ಕರ್ನಾಟಕ ಸರ್ಕಾರ

# ತಹಶೀಲ್ದಾರರ ನ್ಯಾಯಾಲಯ ಹೂವಿನಹಡಗಲಿ

ಸಂ.ಕಂ/ಪಹಣಿ/ವಿವಾದ/81/2014-15 ದಿನಾಂಕ: 26-05-2016

ಉಪಸ್ಥಿತರು : ಹೆಚ್.ವಿಶ್ವನಾಥ, ತಹಶೀಲ್ದಾರರು,

| ವಾದಿಗಳು | ಪ್ರತಿವಾದಿಗಳು / ಎದುರುದಾರರು |
|---|---|
| **ಶ್ರೀಮತಿ ಬಿ ಶಾರದಮ್ಮ ಗಂಡ ದೊಡ್ಡೀರಪ್ಪ ಬಾವಿಮನಿ ದೇವೇಂದ್ರಪ್ಪ ತಂದೆ ದೊಡ್ಡವೀರಪ್ಪ** | **ಶ್ರೀಮತಿ ಬಿ.ಮಂಜುಳ ಗಂಡ ಲೇಟ್ ಬಸವರಾಜಪ್ಪ,ಮ್ಯೆದೂರು ಬಿ ಮಂಜಪ್ಪ ತಂದೆ ಬಿ ದೊಡ್ಡವೀರಪ್ಪ,ಬ್ಯಾಡಗಿ** |

**ದಾವಾ ಜಮೀನಿನ ವಿವರ**

| ಗ್ರಾಮ | ಸರ್ವೇ ನಂಬರ್ | ವಿಸ್ತೀರ್ಣ (ಎಕರೆ.ಸೆಂಟ್ಸ್) |
|---|---|---|
| **ಮಾನ್ಯರ ಮಸಲವಾಡ** | 185/C*/C1B | 1.30 |

**ಪ್ರಸ್ತಾವನೆ :**

ಮೇಲಿನ ದಾವಾ ಜಮೀನುಗಳಿಗೆ ಸಂಬಂದಿಸಿದಂತೆ ಶ್ರೀಮತಿ ಬಿ ಶಾರದಮ್ಮ ಗಂಡ ದೊಡ್ಡೀರಪ್ಪ ಇವರು ಬಾವಿಮನಿ ದೇವೇಂದ್ರಪ್ಪ ತಂದೆ ದೊಡ್ಡವೀರಪ್ಪ ಇವರಿಗೆ ನೊಂದಾಯಿತವಲ್ಲದ ಪಾಲು ವಿಭಾಗ ಪತ್ರದ ದಿನಾಂಕ 05/05/2014 ಮೇರೆಗೆ ಅರ್ಜಿ ಸಲ್ಲಿಸಿ ಪಟ್ಟಾ ಬದಲಾವಣೆ ಮಾಡಲು ಕೋರಿರುತ್ತಾರೆ.ಈ ಮೇರೆಗೆ ಎಂ ಆರ್ ಸಂಖ್ಯೆ ಹೆಚ್17/2014-15 ರಲ್ಲಿ ಪ್ರಕರಣ ದಾಖಲಿಸಿಕೊಂಡು ನಮೂನೆ 21 ನೋಟೀಸನ್ನು ಜಾರಿ ಮಾಡಿ ಪ್ರಚುರಪಡಿಸಿರುತ್ತದೆ ಸದರಿ ನಮೂನೆ 21 ನೋಟೀಸನ್ನು ಕೆಲವರು ಹಿತಾಸಕ್ತರು ನಿರಾಕರಿಸಿದ ಕಾರಣ ಕಂದಾಯ ನೀರೀಕ್ಷಕರು ಹಡಗಲಿ ಇವರು ವಿವಾದಾಸ್ಪದ ಪ್ರಕರಣವೆಂದು ಮುಂದಿನ ಕ್ರಮಕ್ಕಾಗಿ ಸಲ್ಲಿಸಿರುತ್ತಾರೆ..

ಸದರಿ ಪ್ರಕರಣವನ್ನು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ, ಕರ್ನಾಟಕ ಭೂಕಂದಾಯ ಕಾಯ್ದೆ 1964 ಕಲಂ 129ರ ಅನ್ವಯ ನೈಸರ್ಗಿಕ ನ್ಯಾಯ ದೃಷ್ಟಿಯಿಂದ ವಾದಿ ಮತ್ತು ಪ್ರತಿವಾದಿಗಳಿಗೆ ಕೇಳಿಕೊಳ್ಳಲು ಅವಕಾಶ ನೀಡಿ ದಿನಾಂಕ 16/02/2015 ರಂದು ವಿಚಾರಣೆಗೆ ಹಾಜರಾಗಲು ನೋಟೀಸು ನೀಡಿ ಪ್ರಕರಣದ ವಿಚಾರಣೆಯನ್ನು ಪ್ರಾರಂಭಿಸಿ ದಿನಾಂಕ 16/07/2015 ಕ್ಕೆ ಅಂತಿಮಗೊಳಿಸಲಾಯಿತು.

ವಿಚಾರಣೆಗೆ ವಾದಿಗಳು ಮತ್ತು ಪ್ರತಿವಾದಿಗಳು ಹಾಜರಾಗಿ,ಪ್ರತಿವಾದಿಗಳು ಪಾಲು ಪಟ್ಟಿಪ್ರಕಾರ ಬಾವಿಮನಿ ದೇವೇಂದ್ರಪ್ಪ ಇವರ ಹೆಸರಿಗೆ ದಾವಾ ಜಮೀನನ್ನು ಪಟ್ಟಾ ಬದಲಾವಣೆ ಮಾಡಲು ತಮ್ಮ ತಕರಾರು ಇರುವುದಿಲ್ಲವೆಂದು ಲಿಖಿತ ಹೇಳಿಕೆಯನ್ನು ನೀಡಿರುತ್ತಾರೆ. ಆದರೆ ಸರಕಾರಿ ಆದೇಶ ಸಂಖ್ಯೆ ದಿನಾಂಕ ಮೇರೆಗೆ ನೊಂದಾಯಿತವಲ್ಲದ ಪಾಲುವಿಭಾಗದ ದಸ್ತಾವೇಜನ್ನು ಪರಿಗಣಿಸಿ ಹಕ್ಕು ಬದಲಾವಣೆ ಮಾಡಬಾರದೆಂಬ ನಿರ್ದೇಶನ ಇರುವ ಕಾರಣ ಈ ಕೆಳಕಂಡ

**ಆದೇಶ**

ಪ್ರಕರಣದ ಹಿನ್ನೆಲೆ, ವಾಸ್ತವಾಂಶ ಹಾಗು ದಾಖಲೆಗಳನ್ವಯ ಸರಕಾರಿ ಆದೇಶ ಸಂಖ್ಯೆ ಕರ್ನಾಟಕ ಉಚ್ಚ ನ್ಯಾಯಾಲಯ ಆದೇಶ ಸಂಖ್ಯೆ 2002(4) ಕೆ ಸಿ ಸಿ ಆರ್ 2285ರ ಪ್ರಕಾರ ಅರ್ಜಿದಾರರು ತಮ್ಮ ಪಾಲು ವಿಭಾಗ ಪತ್ರವನ್ನು ನೊಂದಾಯಿಸಿಕೊಂಡು ಮರು ಅರ್ಜಿ ಸಲ್ಲಿಸಲು ಸೂಚನೆ ನೀಡಿ ಪ್ರಕರಣವನ್ನು ವಿಲೇಗೊಳಿಸಲು ಆದೇಶಿಸಿದೆ. .

| ಗ್ರಾಮ | ಸರ್ವೇ ನಂಬರ್ | ವಿಸ್ತೀರ್ಣ (ಎಕರೆ.ಸೆಂಟ್ಸ್) |
|---|---|---|
| **ಮಾನ್ಯರ ಮಸಲವಾಡ** | 185/C*/C1B | 1.30 |

ಈ ಆದೇಶವನ್ನು ಬೆರಳಚ್ಚುಮಾಡಿಸಿ, ದಿನಾಂಕ 26-05-2016ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ತಹಶೀಲ್ದಾರರು
ಹೂವಿನಹಡಗಲಿ.

ಪ್ರತಿಗಳನ್ನು :

1) ವಾದಿ ಮತ್ತು ಪ್ರತಿವಾದಿಗಳಿಗೆ ಹಾಗೂ ಅವರ ಪರ ನ್ಯಾಯವಾದಿಗಳಿಗೆ.

2) ಭೂಮಿ ಕೇಂದ್ರಕ್ಕೆ ಸೂಕ್ತ ಕ್ರಮಕ್ಕಾಗಿ.